KABK200010492020

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಮುಧೋಳ**

ಉಪಸ್ಥಿತರು: ಶ್ರೀ ವಿಜಯಕುಮಾರ.ಎಮ್.ಕನ್ನೂರ,
ಬಿ.ಎ.ಎಲ್.ಎಲ್.ಬಿ. (ಸ್ಪೇಷಲ್)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ವ ಪ್ರ.ದ.ನ್ಯಾ.
ದಂಡಾಧಿಕಾರಿಗಳು, ಮುಧೋಳ.

ದಿನಾಂಕ: 6 ನೇ ಮಾರ್ಚ 2026

VIJAYAKUMAR KANNUR
Digitally signed by VIJAYAKUMAR KANNUR
Date: 2026.03.12 12:30:48 +0530

ಅಸಲು ದಾವೆ ನಂ. 207/2020

ವಾದಿ : 1. ಶ್ರೀಮತಿ.ಕಸ್ತೂರೆವ್ವ ಗಂಡ ಗಂಗಪ್ಪ ಮಾದರ,
ವಯಾ: 42 ವರ್ಷ, ಉ: ಮನೆಗೆಲಸ,
ಸಾಃ ಅಂಕಲಗಿ, ಉದಗಟ್ಟಿ,
ಸಾಃ ಕಲಾದಗಿ, ಜಿಃ ಬಾಗಲಕೋಟ.

(ವಾದಿಯ ಪರ ಶ್ರೀ.ಎಸ್.ಆರ್.ಎಲ್., ವಕೀಲರು)

// ವಿರುದ್ಧ//

ಪ್ರತಿವಾದಿಯರು: 1. ಶ್ರೀಮತಿ.ಬಾಲವ್ವ ಗಂಡ ಹಣಮಪ್ಪ ಗುಡಿಹಿಂದ,
ಮೃತ ಇವರ ವಾರಸುದಾರರು,

1 ಎ. ವಿಠ್ಠಲ ತಂದೆ ಹಣಮಪ್ಪ ಗುಡಿಹಿಂದ,
ಮೃತ ಇವರ ವಾರಸುದಾರರು,

**1 ಎ-1.** ಶ್ರೀಮತಿ.ಮಂಜುಳಾ ಗಂಡ ವಿಠ್ಠಲ ಗುಡಿಹಿಂದ,
ವಯಃ 35 ವರ್ಷ, ಉಃ ಮನೆಗೆಲಸ,
ಸಾಃ ಗುಲಗಾಲಜಂಬಗಿ, ತಾಃ ಮುಧೋಳ,
ಜಿಃ ಬಾಗಲಕೋಟ.

**1 ಎ-2.** ಕುಮಾರಿ.ಪ್ರೀಯಾಂಕ ತಂದೆ ವಿಠ್ಠಲ ಗುಡಿಹಿಂದ,
ವಯಃ 16 ವರ್ಷ, ಉಃ ವಿದ್ಯಾರ್ಥಿ,
ಸಾಃ ಗುಲಗಾಲಜಂಬಗಿ, ತಾಃ ಮುಧೋಳ,
ಜಿಃ ಬಾಗಲಕೋಟ.

**1 ಎ-3.** ಕುಮಾರ.ಸತೀಶ ತಂದೆ ವಿಠ್ಠಲ ಗುಡಿಹಿಂದ,
ವಯಃ 14 ವರ್ಷ, ಉಃ ವಿದ್ಯಾರ್ಥಿ,
ಸಾಃ ಗುಲಗಾಲಜಂಬಗಿ, ತಾಃ ಮುಧೋಳ,
ಜಿಃ ಬಾಗಲಕೋಟ.

**1 ಎ-4.** ಕುಮಾರ.ದರ್ಶನ ತಂದೆ ವಿಠ್ಠಲ ಗುಡಿಹಿಂದ,
ವಯಃ 12 ವರ್ಷ, ಉಃ ವಿದ್ಯಾರ್ಥಿ,
ಸಾಃ ಗುಲಗಾಲಜಂಬಗಿ, ತಾಃ ಮುಧೋಳ,
ಜಿಃ ಬಾಗಲಕೋಟ.

**1** ಬಿ. ಶ್ರೀ.ಪುಂಡಲಿಕ ತಂದೆ ಹಣಮಪ್ಪ ಗುಡಿಹಿಂದ,
ವಯಃ 38 ವರ್ಷ, ಉಃ ಕೂಲಿ,
ಸಾಃ ಗುಲಗಾಲಜಂಬಗಿ, ತಾಃ ಮುಧೋಳ,
ಜಿಃ ಬಾಗಲಕೋಟ.

**2.** ಶ್ರೀಮತಿ.ತಾಯವ್ವ ತಂದೆ ದಶಗೀರಪ್ಪ,
ಸಾಃ ಜಾಡರ ಅರಳಿಕಟ್ಟಿ, ತಾಃ ಮುಧೋಳ,
ಜಿಃ ಬಾಗಲಕೋಟ.

**3.** ಶ್ರೀಮತಿ.ಶಾಂತವ್ವ ಗಂಡ ರಾಜಪ್ಪ ಮಾದರ,
ವಯಃ 40 ವರ್ಷ, ಉಃ ಮನೆಗೆಲಸ,
ಸಾಃ ಚೌಡಾಪೂರ, ತಾಃ ಮುಧೋಳ,
ಜಿಃ ಬಾಗಲಕೋಟ.

**4.** ಶ್ರೀ.ಗಿರಿಯಪ್ಪ ತಂದೆ ದಶಗಿರಪ್ಪ ಮಾದರ,
ವಯಃ 38 ವರ್ಷ, ಉಃ ಮನೆಗೆಲಸ,
ಸಾಃ ಜಾಡರ ಅರಳಿಕಟ್ಟಿ, ತಾಃ ಮುಧೋಳ,
ಜಿಃ ಬಾಗಲಕೋಟ.

**5.** ಶ್ರೀ.ಅರ್ಜುನ ತಂದೆ ಯಲ್ಲಪ್ಪ ಮಾದರ ಉರ್ಫ ಬಾಳನ್ನವರ,
ವಯಃ 45 ವರ್ಷ, ಉಃ ಒಕ್ಕಲುತನ,
ಸಾಃ ಜಾಡರ ಅರಳಿಕಟ್ಟಿ, ತಾಃ ಮುಧೋಳ,
ಜಿಃ ಬಾಗಲಕೋಟ.

(ಪ್ರತಿವಾದಿ ನಂ.**1** ರವರು ಮೃತರಾಗಿರುವರು
ಪ್ರತಿವಾದಿ **2** ರಿಂದ **4** ರ ಪರ ಶ್ರೀ.ಎಮ್.ಎಸ್.ಎಮ್ ವಕೀಲರು
ಪ್ರತಿವಾದಿ **1**(ಎ)(ಬಿ) ರ ಪರ ಶ್ರೀ.ಬಿ.ಬಿ.ಬಿ ವಕೀಲರು
ಪ್ರತಿವಾದಿ **5** ರ ಪರ ಶ್ರೀ.ಎಚ್.ಎ.ಕೆ. ವಕೀಲರು )

| | | |
|---|---|---|
| ದಾವಾ ದಾಖಲಾದ ದಿನಾಂಕ | : | **25.11.2020** |
| ದಾವಾದ ಸ್ವರೂಪ | : | ಪಾಲು ವಾಟ್ನಿ ಮತ್ತು ಪ್ರತ್ಯೇಕ ಸ್ವಾಧೀನತೆಗಾಗಿ. |
| ದಾವಾದಲ್ಲಿ ಸಾಕ್ಷಿಗಳ ವಿಚಾರಣೆ ಪ್ರಾರಂಭಿಸಿದ ದಿನಾಂಕ | : | **16.03.2021** |
| ದಾವಾದ ತೀರ್ಪನ್ನು ಘೋಷಿಸಿದ ದಿನಾಂಕ | : | **06.03.2026** |

| | | | | |
|---|---|---|---|---|
| ಕಾಲಾವಧಿ | : | ವರ್ಷ | ತಿಂಗಳು | ದಿನಗಳು |
| | | **05** | **03** | **09** |

(ವಿಜಯಕುಮಾರ ಕನ್ನೂರ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು., ಮುಧೋಳ.

// ತೀರ್ಪು //

ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಆಸ್ತಿಗಳಲ್ಲಿ ತನಗೆ ಬರತಕ್ಕಂತಹ **1/5** ಹಿಸ್ಸೆಯನ್ನು ಪ್ರತ್ಯೇಕ ವಿಭಾಗ

ಮಾಡಿಕೊಡುವ ಕುರಿತು ಹಾಗೂ ನ್ಯಾಯಾಲಯದ ಇತರೆ ನ್ಯಾಯಾಶ್ರಯಗಳನ್ನು ದೊರಕಿಸಿಕೊಳ್ಳುವ ಸಲುವಾಗಿ ಈ ದಾವೆಯನ್ನು ದಾಖಲು ಮಾಡಿರುತ್ತಾರೆ.

**2.** ದಾವಾ ಶೆಡ್ಯೂಲ 'ಎ' ಆಸ್ತಿಗಳ ವರ್ಣನೆ **:**

| ಕ್ರ.ಸಂ. | ಆರ್.ಎಸ್. ನಂ. | ಪ್ರದೇಶ ಎ-ಗು | ಆಸ್ತಿ (ರೂ.ಪೈ.) | ಸ್ಥಳ |
|---|---|---|---|---|
| 1. | 9/2 | 03-02.00<br>ಪಿ.ಕೆ.00-01.08<br>03-00.08 | 01-09 | ಲಕ್ಷಾನಟ್ಟಿ |
| 2. | 75/2 ಬಿ | 01-07.08 | 02-04 | ಜಾಡರ ಅರಳಿಕಟ್ಟಿ |
| 3. | 75/6 | 01-07.08 | 02-03 | ಸದರ |
| 4. | 65/37 | 02-23.00<br>ಪಿ.ಕೆ.00-09.00<br>02-14.00 | 00-69 | ಪಾಲಕಿ ಮಾನ್ಯ |
| 5. | 65/111 | 02-23.00<br>ಪಿ.ಕೆ.00-10.00<br>02-13.00 | 00-67 | ಸದರ |

**3.** ವಾದಪತ್ರದಲ್ಲಿ ತೋರಿಸಿರುವ ವಾದಿ ಮತ್ತು ಪ್ರತಿವಾದಿಯರ ಮನೆತನದ ವಂಶಾವಳಿಃ

ದಶಗೀರೆಪ್ಪ (ಮೃತ) (ಮೂಲ ಪುರುಷ)

ಬಾಳವ್ವ **(ಪ್ರ-1)**

ತಾಯವ್ವ **(ಪ್ರ-2)**

ಕಸ್ತೂರೆವ್ವ **(ವಾದಿ)**

ಶಾಂತವ್ವ **(ಪ್ರ-3)**

ಗಿರಿಯಪ್ಪ **(ಪ್ರ-4)**

**4.** ವಾದ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇದೆ.

ವಾದಿಯು ವಾದ ಪತ್ರದಲ್ಲಿ ಹೇಳಿರುವಂತೆ ತಮ್ಮ ಕುಟುಂಬದ ಮೂಲಪುರುಷ ದಶಗಿರೆಪ್ಪ ತಂದೆ ಹಣಮಪ್ಪ ಮಾದರ ಹಾಗೂ ಇವರ ಹೆಂಡತಿ ವೆಂಕವ್ವ ಮೃತಪಟ್ಟಿರುವರು. ಇವರಿಗೆ ವಾದಿ ಹಾಗೂ ಪ್ರತಿವಾದಿ **1** ರಿಂದ **4** ರವರು ಮಕ್ಕಳಾಗಿರುವರು. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಜಂಟಿ ಹಿಂದೂ ಅವಿಭಕ್ತ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುವವು. ದಾವಾ ಆಸ್ತಿಗಳನ್ನು ವಾದಿ ಹಾಗೂ ಪ್ರತಿವಾದಿಯರು ಜಂಟಿಯಾಗಿ ಉಪಭೋಗ ಮಾಡುತ್ತಾ ಬಂದಿರುವರು. ವಾದಿ ಮತ್ತು ಪ್ರತಿವಾದಿಯರ ಮಧ್ಯ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಯಾವುದೇ ಪಾಲು ವಾಟ್ನಿಯಾಗಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಮಧ್ಯ ಭಿನ್ನಾಭಿಪ್ರಾಯಗಳು ಬಂದಿರುವುದರಿಂದ ವಾದಿಯು ಪ್ರತಿವಾದಿಯರಿಗೆ ತನ್ನ **1/5** ಹಿಸ್ಸೆಯನ್ನು ನೀಡುವಂತೆ ವಿನಂತಿಸಿಕೊಂಡಿರುವರು. ಆದರೆ ಪ್ರತಿವಾದಿಯರು ವಾದಿಯ ಹಿಸ್ಸೆಯನ್ನು ನೀಡಲು ನಿರಾಕರಿಸಿರುವುದರಿಂದ ಈ ದಾವೆಗೆ ದಿನಾಂಕಃ **29.10.2020** ರಂದು ವಾಜ್ಯ ಕಾರಣ ಉಂಟಾಗಿರುವುದಾಗೆಂದು ಹೇಳಿ ವಾದಪತ್ರದಲ್ಲಿ ಕೋರಿರುವಂತೆ ದಾವೆಯನ್ನು ಡಿಕ್ರಿಗೊಳಿಸುವಂತೆ ವಿನಂತಿಸಿಕೊಂಡಿರುತ್ತಾರೆ.

**5.** ಈ ದಾವೆ ದಾಖಲಾದ ನಂತರ ದಾವಾ ಸಮನ್ಸ್ ಪ್ರತಿವಾದಿಯರಿಗೆ ಜಾರಿಯಾಗಿದ್ದು, ಪ್ರತಿವಾದಿ **1** ರವರು ಮೃತರಾಗಿರುವರು. ಇವರ ವಾರಸುದಾರರಾದ ಪ್ರತಿವಾದಿ **1**(ಎ) ಮತ್ತು (ಬಿ) ರವರು ಹಜರಾಗಿರುವರು. ಪ್ರತಿವಾದಿ **1**(ಎ) ರವರು ಮೃತಪಟ್ಟಿರುವರ ಇವರ ವಾರಸುದಾರರಾದ ಪ್ರತಿವಾದಿ **1 ಎ 1** ರಿಂದ ಪ್ರತಿವಾದಿ **1 ಎ 4**

ರವರು ಶ್ರೀ.ಬಿ.ಬಿ.ಬಿ ವಕೀಲರ ಮೂಲಕ ಹಾಜರಾಗಿರುವರು. ಪ್ರತಿವಾದಿ 2 ರಿಂದ 4 ರವರು ಶ್ರೀ.ಎಮ್.ಎಸ್.ಎಮ. ವಕೀಲರ ಮೂಲಕ ಹಾಗೂ ಪ್ರತಿವಾದಿ 5 ರವರು ಶ್ರಿ.ಎಚ್.ಎ.ಕೆ ಇವರ ಮೂಲಕ ಹಾಜರಾಗಿರುವರು. ಪ್ರತಿವಾದಿ 2 ರಿಂದ 4 ರವರು ಹಾಗೂ ಪ್ರತಿವಾದಿ 5 ರವರು ತಮ್ಮ ಪ್ರತ್ಯೇಕ ಲಿಖಿತ ಪತ್ರವನ್ನು ದಾಖಲಿಸಿರುವರು.

**6.** ಪ್ರತಿವಾದಿ 2 ರಿಂದ 4 ರವರು ಸಲ್ಲಿಸಿದ ಲಿಖಿತ ಪತ್ರದ ಸಂಕ್ಷಿಪ್ತ ಸಾರಾಂಶ:

ವಾದಿಯರ ಮತ್ತು ಪ್ರತಿವಾದಿಯರ ಸಂಬಂಧವನ್ನು ನಿರಾಕರಿಸಿರುವುದಿಲ್ಲ. ಅದೇರೀತಿ ವಾದ ಪತ್ರದ ಖಂಡಿಕೆ 3 ರಲ್ಲಿ ಹೇಳಿರುವಂತೆ ವಂಶಾವಳಿಯನ್ನು ಒಪ್ಪಿಕೊಂಡಿರುವರು. ವಾದ ಪತ್ರದ ಖಂಡಿಕೆ 3 ಹಾಗೂ 4 ರಲ್ಲಿ ಹೇಳಿರುವ ಸಂಗತಿಗಳಂತೆ ದಾವಾ ಆಸ್ತಿಗಳು ವಾದಿಯರ ಮತ್ತು ಪ್ರತಿವಾದಿಯರ ಮೂಲಪುರುಷರಿಂದ ಬಂದಿರುವಂತಹ ಆಸ್ತಿಗಳನ್ನು ವಾದಿ ಮತ್ತು ಪ್ರತಿವಾದಿಯರು ಸಾಮೂಹಿಕವಾಗಿ ವಹಿವಾಟಿ ಮತ್ತು ಉಪಭೋಗ ಮಾಡುತ್ತಿರುವ ಎಂಬ ಸಂಗತಿ ನಿಜವಿರುವುದಿಲ್ಲ. ಕುಟುಂಬದ ಮೂಲ ಪುರುಷ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯಾದ ದಾಖಲಾತಿಗಳನ್ನು ಮಾಡದೇ ಮೃತ ಪಟ್ಟಿರುತ್ತಾನೆ ಎಂಬ ಸಂಗತಿ ನಿಜವಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಯಾವುದೇ ರೀತಿ ಪಾಲು ವಾಟ್ನಿಯಾಗಿರುವುದಿಲ್ಲ ಎಂಬ ಸಂಗತಿ ಸಹ ನಿಜವಿರುವುದಿಲ್ಲ. ವಾದ ಪತ್ರದ ಖಂಡಿಕೆ 5 ರಲ್ಲಿ ಹೇಳಿರುವ ಸಂಗತಿ ನಿಜವಿರುವುದಿಲ್ಲ. ವಾದ ಪತ್ರದ ಖಂಡಿಕೆ 4 ರಲ್ಲಿ ಹೇಳಿರುವಂತೆ ಪ್ರತಿವಾದಿ 1 ರಿಂದ 4 ರವರು ವಾದಿಯ ಕಾನೂನುಬದ್ದ ಹಿಸ್ಸೆಯನ್ನು

ಮುಳುಗಿಸುವ ಉದ್ದೇಶದಿಂದ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿರುವವರು ಎಂಬ ಸಂಗತಿ ಸಂಪೂರ್ಣ ಸುಳ್ಳಿನಿಂದ ಕೂಡಿರುವುದು.

**7.** ನಿಜ ಸಂಗತಿ ಏನೆಂದರೆ ವಾದಿ, ಪ್ರತಿವಾದಿ **1** ಮತ್ತು **3** ರವರಿಗೆ ಸಾಕಷ್ಟು ಹಣ ಖರ್ಚು ಮಾಡಿ ಬಂಗಾರವನ್ನು ಹಾಗೂ ಹಣವನ್ನು ನೀಡಿ ಒಳ್ಳೆಯ ಮನೆತನಕ್ಕೆ ಮದುವೆ ಮಾಡಿಕೊಟ್ಟಿದ್ದು ಸದರಿಯರು ತಮ್ಮ ಗಂಡನ ಮನೆಯಲ್ಲಿ ಖಾಯಂ ಆಗಿ ವಾಸವಾಗಿರುವರು. ವಾದಿ, ಪ್ರತಿವಾದಿ **1** ಮತ್ತು **3** ರವರು ದಾವಾ ಆಸ್ತಿಗಳ ಸಾಮೂಹಿಕ ಕಬ್ಜಾ ವಹಿವಾಟಿನಲ್ಲಿರುವುದಿಲ್ಲ. ದಾವಾ ಆಸ್ತಿಗಳಲ್ಲಿ ವಾದಿ ಮತ್ತು ಪ್ರತಿವಾದಿ **1** ರಿಂದ **4** ರವರ ಮಧ್ಯ ಪಾಲು ವಿಭಾಗವಾಗಿದ್ದು, ಈ ಪಾಲು ವಿಭಾಗದಲ್ಲಿ ಪ್ರತಿವಾದಿ **2** ರವರಿಗೆ ಸರ್ವೇ ನಂ.**65/37,** ಸರ್ವೇ ನಂ.**75/2** ಬಿ ಬಂದಿರುವವು. ಅದೇ ರೀತಿ ಸರ್ವೇ ನಂ.**75/6** ಪ್ರತಿವಾದಿ **4** ರವರ ಪಾಲಿಗೆ ಬಂದಿರುವವು. ಸರ್ವೇ ನಂ.**9/2** ಪ್ರತಿವಾದಿ **2** ಮತ್ತು **4** ರವರ ಪಾಲಿಗೆ ಬಂದಿದ್ದು ಆ ಪ್ರಕಾರ ಅವರ ಹೆಸರುಗಳು ದಾವಾ ಆಸ್ತಿಯ ಜಮೀನುಗಳ ಹಃರದಲ್ಲಿ ದಾಖಲಾಗಿರುವವು. ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ ಆದಂತಹ ಡ ನಂಬರಗಳು ವಾದಿಯ ಗಮನಕ್ಕೆ ಇದ್ದರೂ ಸಹಿದ ಇಲ್ಲಿಯವರೆಗೂ ವಾದಿಯು ಪ್ರಶ್ನಿಸಿರುವುದಿಲ್ಲ. ಆದ್ದರಿಂದ ಹಕ್ಕು ಬದಲಾವಣೆ ಆದೇಶವು ವಾದಿಗೆ ಬಂಧನಕಾರಿಯಾಗಿರುವುದು. ವಾದಪತ್ರದಲ್ಲಿ ಹೇಳಿರುವಂತೆ ಈ ದಾವೆಗೆ ಯಾವುದೇ ವಾಜ್ಯ ಕಾರಣ ಉಂಟಾಗಿರುವುದಿಲ್ಲ ಹಾಗೂ ದಾವಾ ಆಸ್ತಿಗಳ ಮೌಲ್ಯಮಾಪನ ಸಮಂಜಸವಾಗಿರುವುದಿಲ್ಲ. ಆದ್ದರಿಂದ ಈ ದಾವೆಯನ್ನು ಖರ್ಚುಸಹಿತ ವಜಾಗೊಳಿಸುವಂತೆ ವಿನಂತಿಸಿಕೊಂಡಿರುವರು.

**8.** ಪ್ರತಿವಾದಿ **5** ರವರು ಸಲ್ಲಿಸಿದ ಲಿಖಿತ ಪತ್ರದ ಸಂಕ್ಷಿಪ್ತ ಸಾರಾಂಶ**:**

ವಾದಿಯರ ಮತ್ತು ಪ್ರತಿವಾದಿಯರ ಸಂಬಂಧವನ್ನು ನಿರಾಕರಿಸಿರುವುದಿಲ್ಲ. ಅದೇರೀತಿ ವಾದ ಪತ್ರದ ಖಂಡಿಕೆ 3 ರಲ್ಲಿ ಹೇಳಿರುವಂತೆ ವಂಶಾವಳಿಯನ್ನು ಒಪ್ಪಿಕೊಂಡಿರುವರು. ಆದರೆ ವಾದ ಪತ್ರದಲ್ಲಿ ಹೇಳಿರುವಂತೆ ದಾವಾ ಆಸ್ತಿಗಳು ವಾದಿಯರ ಮತ್ತು ಪ್ರತಿವಾದಿಯರ ಮೂಲಪುರುಷರಿಂದ ಬಂದಿರುವಂತಹ ಹಿಂದೂ ಅವಿಭಕ್ತ ಕುಟುಂಬದ ಹಿರಿಯರಿಂದ ಬಂದಿರುವಂತಹ ಆಸ್ತಿಗಳಾಗಿರುವುದಿಲ್ಲ. ಈ ವಾದ ಪತ್ರದಲ್ಲಿ ಹೇಳಿರುವಂತೆ ವಾದಿ ಮತ್ತು ಪ್ರತಿವಾದಿಯರ ಮಧ್ಯ ಪಾಲು ವಾಟ್ನಿ ಆಗಿರುವುದಿಲ್ಲ ಎಂಬ ಸಂಗತಿ ನಿಜವಿರುವುದಿಲ್ಲ. ವಾದ ಪತ್ರದ ಖಂಡಿಕೆ 5 ರಲ್ಲಿ ಹೇಳಿರುವಂತೆ ಪ್ರತಿವಾದಿ 1 ರಿಂದ 4 ರವರು ವಾದಿಯ ಕಾನೂನುಬದ್ದ ಹಿಸ್ಸೆಯನ್ನು ಮುಳುಗಿಸುವ ಉದ್ದೇಶದಿಂದ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿರುವರು ಎಂಬ ಸಂಗತಿ ಸಂಪೂರ್ಣ ಸುಳ್ಳಿನಿಂದ ಕೂಡಿರುವುದು.

**9.** ನಿಜ ಸಂಗತಿ ಏನೆಂದರೆ ವಾದಿ, ಪ್ರತಿವಾದಿ 1 ಮತ್ತು 3 ರವರಿಗೆ ತಮ್ಮ ತಂದೆ ಸಾಕಷ್ಟು ಹಣ ಖರ್ಚು ಮಾಡಿ ಬಂಗಾರವನ್ನು ಹಾಗೂ ಹಣವನ್ನು ನೀಡಿ ಒಳ್ಳೆಯ ಮನೆತನಕ್ಕೆ ಮದುವೆ ಮಾಡಿಕೊಟ್ಟಿದ್ದು ಸದರಿಯರು ತಮ್ಮ ಗಂಡನ ಮನೆಯಲ್ಲಿ ಖಾಯಂ ಆಗಿ ವಾಸವಾಗಿರುವರು. ವಾದಿ, ಪ್ರತಿವಾದಿ 1 ಮತ್ತು ಪ್ರತಿವಾದಿ 3 ರವರಿಗೆ ಯಾವುದೇ ಹಕ್ಕು ವ ಹಿತಾಸಕ್ತಿ ಇರುವುದಿಲ್ಲ. ದಿನಾಂಕಃ 04.01.2023 ರಂದು ಪ್ರತಿವಾದಿ 2 ಮತ್ತು 4 ರವರು ದಾವಾ ಜಮೀನು ಸರ್ವೆ ನಂ.9/2 ಕ್ಕೆ ಸಂಬಂಧಪಟ್ಟಂತೆ ಪಾಲು ವಿಭಾಗ ಮಾಡಿಕೊಂಡಿದ್ದು

ಸದರಿ ವಾಟ್ನಿ ಪತ್ರವು ಮುಧೋಳದ ಉಪನೊಂದಣಾಧಿಕಾರಗಳು ಮುಧೋಳ ಇವರಲ್ಲಿ ನೊಂದಣಿಯಾಗಿರುವುದು. ಸದರಿ ವಾಟ್ನಿ ಪತ್ರದ ಪ್ರಕಾರ ಜಮೀನು ಸರ್ವೆ ನಂ.9/2 ಜಮೀನು ಪ್ರತಿವಾದಿ 2 ರವರ ಪಾಲಿಗೆ ಬಂದಿದ್ದು ಆ ಪ್ರಕಾರ ಅವಳು ಕಬ್ಜಾ ವಹಿವಾಟಿನಲ್ಲಿರುವರು. ಪ್ರತಿವಾದಿ 2 ಇವಳು ಸರ್ವೆ ನಂ.9/2 ರ ಜಮೀನನ್ನು ಪ್ರತಿವಾದಿ 5 ರವರಿಗೆ ದಿನಾಂಕಃ 18.01.2023 ರ ನೊಂದಾಯಿತ ಭಕ್ಷಿಸ ಪತ್ರದ ಮೂಲಕ ನೀಡಿರುವರು. ಆ ಪ್ರಕಾರ ಪ್ರತಿವಾದಿಯರು ದಾವಾ ಆಸ್ತಿಗಳ ಮಾಲೀಕರು ಹಾಗೂ ಕಬ್ಜಾದಾರರಾಗಿರುವರು. ಈ ದಾವೆಗೆ ಯಾವುದೇ ವಾಜ್ಯ ಕಾರಣ ಉಂಟಾಗಿರುವುದಿಲ್ಲ. ವಾದಿಯರು ಸಂದಾಯ ಮಾಡಿರುವ ನ್ಯಾಯಾಲಯದ ಶುಲ್ಕ ಸಮಂಜಸವಾಗಿರುವುದಿಲ್ಲ. ಈ ದಾವೆಯು ಕಾಲಪರಿಮಿತಿ ಅಧಿನಿಯಮದಿಂದ ಪ್ರತಿಷೇದಿತವಾಗಿರುವುದು. ಆದ್ದರಿಂದ ಈ ದಾವೆಯು ಕಾನೂನಿನ ಅಡಿಯಲ್ಲಿ ಉರ್ಜಿತವಾಗಿರುವುದಿಲ್ಲ. ಈ ಪ್ರತಿವಾದಿಗೆ ತೊಂದರೆ ನೀಡಿರುವ ಸಲುವಾಗಿ ಈ ಸುಳ್ಳು ದಾವೆಯನ್ನು ದಾಖಲು ಮಾಡಿದ್ದು, ಆದ್ದರಿಂದ ವಾದಿಯ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ವಿನಂತಿಸಿಕೊಂಡಿರುವರು.

**10.** ವಾದಿಯ ವಾದಪತ್ರ ಮತ್ತು ಪ್ರತಿವಾದಿಯರ ಲಿಖಿತ ಪತ್ರಗಳ ಆಧಾರದ ಮೇರೆಗೆ ಈ ಕೆಳಕಂಡ ವಿವಾದಾಂಶಗಳನ್ನು ಈ ನ್ಯಾಯಾಲಯದ ಪೂರ್ವಿನ್ಯಾಯಾಧೀಶರು ರಚಿಸಿರುವರು.

**-: ISSUES :-**

1. Whether the plaintiffs prove that, the suit schedule properties are the ancestral joint family properties enjoyed by herself and defendants together ?

2. Whether the Court fee paid by the plaintiff is sufficient ?

3. Whether the defendants prove the alleged partition effected in between plaintiff and the defendants as averred in para No.8 of the written statement ?

4. Whether the plaintiff is entitled for suit relief as prayed for ?

5. What order or decree ?

**:ADDL. ISSUES Date: 04.12.2024 :**

1. Whether the defendant No.5 proves that defendant No.5 has gifted her share in Sy.No.9/2 in favour of defendant No.5 ?

2. Whether the defendant No.5 proves that he is the absolute owner and in possession of the property by virtue of registered gift deed ?

**11.** ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತುಪಡಿಸಲು ವಾದಿಯು ತನ್ನನ್ನು ಪಿಡಬ್ಲ್ಯೂ-1 ಎಂದು ವಿಚಾರಣೆಗೊಳಪಡಿಸಿಕೊಂಡು ತಮ್ಮ

ಮುಖ್ಯ ವಿಚಾರಣೆಯಲ್ಲಿ ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ಯಥಾವತ್ತಾಗಿ ಪುನರುಚ್ಚರಿಸಿ, ತನ್ನ ಪರವಾಗಿ ನಿಪಿ-**1** ರಿಂದ ನಿಪಿ-**13** ದಾಖಲೆಗಳನ್ನು ಗುರುತಿಸಿಕೊಂಡು ತನ್ನ ಸಾಕ್ಷ್ಯವನ್ನು ಮುಕ್ತಾಯಗೊಳಿಸಿಕೊಂಡಿರುವರು.

**12.** ಅದೇ ರೀತಿ ಲಿಖಿತ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತುಪಡಿಸಲು ಪ್ರತಿವಾದಿ ನಂ.**5** ರವರು ಉಳಿದ ಪ್ರತಿವಾದಿಯರ ಪರವಾಗಿ ತನ್ನನ್ನು ಡಿ.ಡಬ್ಲ್ಯೂ-**1** ಎಂದು ವಿಚಾರಣೆಗೊಳಪಡಿಸಿಕೊಂಡು ತಮ್ಮ ಲಿಖಿತ ಪತ್ರದಲ್ಲಿ ಹೇಳಿರುವ ಅಂಶಗಳನ್ನು ಯಥಾವತ್ತಾಗಿ ಪುನರುಚ್ಚರಿಸಿ ತಮ್ಮ ಸಾಕ್ಷ್ಯಕ್ಕೆ ಪೂರಕವಾಗಿ ನಿಡಿ-**1** ರಿಂದ ನಿಡಿ-**3** ದಾಖಲೆಗಳನ್ನು ಗುರುತಿಸಿಕೊಂಡು ತಮ್ಮ ಸಾಕ್ಷ್ಯವನ್ನು ಮುಕ್ತಾಯಗೊಳಿಸಿಕೊಂಡಿರುವರು.

**13.** ವಾದಿ ಮತ್ತು ಪ್ರತಿವಾದಿಯರ ಪರ ವಕೀಲರ ವಾದಗಳನ್ನು ಆಲಿಸಿ ಪ್ರಕರಣದ ವಸ್ತುಸ್ಥಿತಿ ಮತ್ತು ಸಂಗತಿಗಳನ್ನು ಪರಿಶೀಲಿಸಿದ ನಂತರ ಮೇಲ್ಕಂಡ ವಿವಾದಾಂಶಗಳಿಗೆ ಈ ಕೆಳಗಿನಂತೆ ಉತ್ತರಿಸುತ್ತೇನೆ.

ವಿವಾದಾಂಶ ನಂ.**1** **:** ಸಕಾರಾತ್ಮಕವಾಗಿ
ವಿವಾದಾಂಶ ನಂ.**2** **:** ಸಕಾರಾತ್ಮಕವಾಗಿ
ವಿವಾದಾಂಶ ನಂ.**3** **:** ನಕಾರಾತ್ಮಕವಾಗಿ
ವಿವಾದಾಂಶ ನಂ.**4** **:** ಸಕಾರಾತ್ಮಕವಾಗಿ
ಹೆಚ್ಚುವರಿ ವಿವಾದಾಂಶ ನಂ.**1** **:** ಭಾಗಶಃ ಸಕಾರಾತ್ಮಕವಾಗಿ
ಹೆಚ್ಚುವರಿ ವಿವಾದಾಂಶ ನಂ.**2** **:** ಭಾಗಶಃ ಸಕಾರಾತ್ಮಕವಾಗಿ
ವಿವಾದಾಂಶ ನಂ.**5** **:** ಅಂತಿಮ ಆದೇಶದಂತೆ,
ಈ ಕೆಳಕಂಡ ಕಾರಣಗಳಿಗಾಗಿ.

ಕಾ ರ ಣ ಗ ಳು

**13.** ವಿವಾದಾಂಶ ನಂ.**1:-** ಈ ವಿವಾದಾಂಶ 1 ನ್ನು ರುಜುವಾತುಪಡಿಸುವ ಭಾರ ವಾದಿಯ ಮೇಲೆ ಇರುವುದು. ಪ್ರತಿವಾದಿಯರು ತಮ್ಮ ಲಿಖಿತ ಪತ್ರದಲ್ಲಿ ವಾದಿ ಮತ್ತು ಪ್ರತಿವಾದಿಯರ ಸಂಬಂಧದ ಬಗ್ಗೆ ಮತ್ತು ವಂಶಾವಳಿಯನ್ನು ಒಪ್ಪಿಕೊಂಡಿರುವುದರಿಂದ ಇವರ ಸಂಬಂಧದ ಬಗ್ಗೆ ಯಾವುದೇ ವಿವಾದವಿರುವುದಿಲ್ಲ. ಪ್ರತಿವಾದಿಯರು ತಮ್ಮ ಲಿಖಿತ ಪತ್ರದಲ್ಲಿ ದಾವಾ ಆಸ್ತಿಗಳು ತಮ್ಮ ಕುಟುಂಬದ ಹಿರಿಯರಿಂದ ಬಂದಿರುವ ಆಸ್ತಿಗಳೆಂಬುದನ್ನು ಒಪ್ಪಿಕೊಂಡಿದ್ದು ಆದರೆ ದಾವಾ ಆಸ್ತಿಗಳನ್ನು ವಾದಿ ಮತ್ತು ಪ್ರತಿವಾದಿಯರು ಸಾಮೂಹಿಕವಾಗಿ ವಹಿವಾಟಿ ಉಪಭೋಗ ಮಾಡುತ್ತಿರುವರು ಎಂಬ ಸಂಗತಿಯನ್ನು ಮಾತ್ರ ನಿರಾಕರಿಸಿರುವರು.

**14.** ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತುಪಡಿಸಲು ವಾದಿಯು ತನ್ನನ್ನು ಪಿಡಬ್ಲ್ಯೂ-1 ಎಂದು ವಿಚಾರಣೆಗೊಳಪಡಿಸಿಕೊಂಡು ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ಯಥಾವತ್ತಾಗಿ ಪುನರುಚ್ಚರಿಸಿ ನಿಪಿ-1 ರಿಂದ ನಿಪಿ-13 ದಾಖಲೆಗಳನ್ನು ಗುರುತಿಸಿಕೊಂಡಿರುವರು.

ನಿಪಿ-1 ರ ದಾಖಲಾತಿಯು ಸರ್ವೆ ನಂ.9/2 ರ 2020-21 ನೇ ಸಾಲಿನ ಪಹಣಿ ಪತ್ರಿಕೆಯಾಗಿರುವುದು. ನಿಪಿ-2 ರ ದಾಖಲಾತಿಯು ಸರ್ವೆ ನಂ.75/2 ಬ ರ 2020-21 ನೇ ಸಾಲಿನ ಪಹಣಿ ಪತ್ರಿಕೆಯಾಗಿರುವುದು. ನಿಪಿ-3 ರ ದಾಖಲಾತಿಯು ಸರ್ವೆ ನಂ.75/3 ರ 2020-21 ನೇ ಸಾಲಿನ ಪಹಣಿ ಪತ್ರಿಕೆಯಾಗಿರುವುದು. ನಿಪಿ-4 ರ ದಾಖಲಾತಿಯು ಸರ್ವೆ

ನಂ.65/37 ರ 2020-21 ನೇ ಸಾಲಿನ ಪಹಣಿ ಪತ್ರಿಕೆಯಾಗಿರುವುದು. ನಿಪಿ-5 ರ ದಾಖಲಾತಿಯು ಸರ್ವೇ ನಂ.65/115 ರ 2020-21 ನೇ ಸಾಲಿನ ಪಹಣಿ ಪತ್ರಿಕೆಯಾಗಿರುವುದು. ನಿಪಿ-6 ರ ದಾಖಲಾತಿಯು ಎಮ್.ಆರ್.ನಂ.ಎಚ್12/2018-19 ರ ಮ್ಯುಟೇಶನ ರಜಿಸ್ಟರನ ಪ್ರತಿಯಾಗಿರುವುದು. ನಿಪಿ-7 ರ ದಾಖಲಾತಿಯು ಎಮ್.ಆರ್.ನಂ.ಎಚ್17/2019-20 ರ ಮ್ಯುಟೇಶನ ರಜಿಸ್ಟರನ ಪ್ರತಿಯಾಗಿರುವುದು. ನಿಪಿ-8 ರ ದಾಖಲಾತಿಯು ಎಮ್.ಆರ್.ನಂ.ಎಚ್-7/2013-14 ರ ಮ್ಯುಟೇಶನ ರಜಿಸ್ಟರನ ಪ್ರತಿಯಾಗಿರುವುದು. ನಿಪಿ-9 ರ ದಾಖಲಾತಿಯು ಎಮ್.ಆರ್.ನಂ.ಎಚ್-9/2015-16 ಮ್ಯುಟೇಶನ ರಜಿಸ್ಟರನ ಪ್ರತಿಯಾಗಿರುವುದು. ನಿಪಿ-10 ರ ದಾಖಲಾತಿಯು ಎಮ್.ಆರ್.ನಂ.ಎಚ್-3/2013-14 ರ ಮ್ಯುಟೇಶನ ರಜಿಸ್ಟರನ ಪ್ರತಿಯಾಗಿರುವುದು. ನಿಪಿ-11 ರ ದಾಖಲಾತಿಯು ಎಮ್.ಆರ್.ನಂ.ಎಚ್-3/2015-16 ರ ಮ್ಯುಟೇಶನ ರಜಿಸ್ಟರನ ಪ್ರತಿಯಾಗಿರುವುದು. ನಿಪಿ-12 ರ ದಾಖಲಾತಿಯು ಸರ್ವೇ ನಂ.9/2 ರ 2023-24 ನೇ ಸಾಲಿನ ಪಹಣಿ ಪತ್ರಿಕೆಯಾಗಿರುವುದು. ನಿಪಿ-13 ರ ದಾಖಲೆಯು ಮ್ಯುಟೇಶನ ರಜಿಸ್ಟರನ ಪ್ರತಿಯಾಗಿರುವುದು.

**15.** ಪ್ರತಿವಾದಿಯರ ಪರವಾಗಿ 5 ನೇ ಪ್ರತಿವಾದಿಯು ತನ್ನನ್ನು ಡಿ.ಡಬ್ಲ್ಯೂ-1 ಎಂದು ವಿಚಾರಣೆಗೊಳಪಡಿಸಿಕೊಂಡು ತನ್ನ ಸಾಕ್ಷ್ಯ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತನ್ನ ಲಿಖಿತ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ಯಥಾವತ್ತಾಗಿ ಪುನರುಚ್ಚರಿಸಿ ನಿಡಿ.1 ರಿಂದ ನಿಡಿ-3 ದಾಖಲೆಗಳನ್ನು ಗುರುತಿಸಿಕೊಂಡಿರುವರು.

**16.** ನಿಡಿ-1 ರ ದಾಖಲೆಯು ದಿನಾಂಕಃ 18.01.2023 ರ ನೊಂದಾಯಿತ ಬಕ್ಷಿಸ ಪತ್ರದ ಅಸಲು ಪ್ರತಿಯಾಗಿರುವುದು. ನಿಡಿ-2 ರ ದಾಖಲೆಯು ಎಂ.ಆರ್.ನಂ.ಎಚ್.14 ರ ದಿನಾಂಕಃ 31.01.2023 ರ ಆದೇಶದ ದಾಖಲಾತಿಯಾಗಿರುವುದು. ನಿಡಿ-3 ರ ದಾಖಲಾತಿಯು ದಾವಾ ಜಮೀನಿನ ಪಹಣಿ ಪತ್ರಿಕೆಯಾಗಿರುವುದು.

**17.** ಡಿಡಬ್ಲ್ಯೂ-1 ರವರನ್ನು ವಾದಿಯ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ ವಾದ ಪತ್ರದಲ್ಲಿರುವ ವಂಶಾವಳಿಯ ಸಂಬಂಧವನ್ನು ಒಪ್ಪಿಕೊಂಡಿದ್ದು ದಾವಾ ಶೆಡ್ಯೂಲ ಎ ಆಸ್ತಿಗಳು ಕುಟುಂಬದ ಮೂಲ ಪುರುಷ ಮೃತ ದಸ್ತಗೀರೆಪ್ಪನ ಆಸ್ತಿಗಳೆಂಬುದನ್ನು ಒಪ್ಪಿಕೊಂಡಿರುವನು. ಅದೇರೀತಿ ಪಿಡಬ್ಲ್ಯೂ-1 ರವರನ್ನು ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ ಪಾಟೀ ಸವಾಲಿನಲ್ಲಿಯೂ ಸಹ ದಾವಾ ಆಸ್ತಿಗಳು ತಮ್ಮ ತಂದೆಯ ಆಸ್ತಿಗಳೆಂಬುದನ್ನು ಸ್ಪಷ್ಟವಾಗಿ ಸಾಕ್ಷಿ ನುಡಿದು ಪ್ರತಿವಾದಿ 2 ಮತ್ತು 4 ರವರು ತನಗೆ ಮಾಹಿತಿ ನೀಡದೇ ವಾಟ್ನಿ ಮಾಡಿಕೊಂಡಿದ್ದು, ಅದು ಖೊಟ್ಟಿಯಾಗಿರುವುದಾಗೆಂದು ಸಾಕ್ಷಿ ನುಡಿದಿರುವರು. ಆದ್ದರಿಂದ ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಹಿರಿಯರಿಂದ ಬಂದಿರುವಂತಹ ಆಸ್ತಿಗಳಾಗಿದ್ದು ಮತ್ತು ವಾದಿ ಮತ್ತು ಪ್ರತಿವಾದಿ 1 ರಿಂದ 4 ರವರು ಮೃತ ದಸ್ತಗೀರೆಪ್ಪನ ಮೊದಲನೆ ವರ್ಗದ ಕಾನೂನುಬದ್ದವಾದ ವಾರಸುದಾರರಾಗಿರುವರು. ಆದ್ದರಿಂದ ಈ **1**ನೇ ವಿವಾದಂಶವನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

**18.** ವಿವಾದಂಶ **2 :-**

ಈ ವಿವಾದಂಶವನ್ನು ರುಜುವಾತು ಪಡಿಸುವ ಭಾರ ವಾದಿಯರ ಮೇಲೆ ಇರುವುದು. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನ್ಯಾಯಾಲಯಗಳ ಮೌಲ್ಯ ಮಾಪನ ಅಧಿನಿಯಮ ಕಲಂ.7(2)(ಬಿ) ಸಹ ಕಲಂ.35(2) ರಡಿಯಲ್ಲಿ ನ್ಯಾಯಾಲಯ ಶುಲ್ಕವನ್ನು ಸಂದಾಯ ಮಾಡಿರುವರು. ಆದರೆ ಪ್ರತಿವಾದಿಯರು ವಾದಿಯರು ದಾವಾ ಆಸ್ತಿಗಳ ಮಾರುಕಟ್ಟೆಯ ಮೌಲ್ಯ ರೂ.27 ಲಕ್ಷ ಮಾಡಿದ್ದು ಅದರಲ್ಲಿನ ವಾದಿಯರ ಹಿಸ್ಸೆ ರೂ.5,40,000/- ಅಂತಾ ಮಾಡಿರುವ ಮೌಲ್ಯ ನಿಜವಿರುವುದಿಲ್ಲವೆಂಬುದನ್ನು ರುಜುವಾತು ಪಡಿಸಲು ಪ್ರತಿವಾದಿಯರು ಯಾವುದೇ ಸಾಕ್ಷಾಧಾರಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ವಾದಿಯು ಮಾಡಿರುವ ದಾವಾ ಆಸ್ತಿಗಳ ಮಾರುಕಟ್ಟೆಯ ಮೌಲ್ಯ ಅದರ ಮೇಲೆ ಸಂದಾಯ ಮಾಡಿರುವ ನ್ಯಾಯಲಯ ಶುಲ್ಕ ಸಮಂಜಸವಾಗಿರುವುದು. ಆದ್ದರಿಂದ ಈ 2ನೇ ವಿವಾದಂಶವನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

**19.** ವಿವಾದಂಶ **3** ಃ

ಈ ವಿವಾದಂಶವನ್ನು ರುಜುವಾತುಪಡಿಸುವ ಭಾರ ಪ್ರತಿವಾದಿಯರ ಮೇಲೆ ಇರುವುದು. ಪ್ರತಿವಾದಿಯರು ತಮ್ಮ ಲಿಖಿತ ಪತ್ರದ ಖಂಡಿಕೆ 8ರಲ್ಲಿ ಹೇಳಿರುವಂತೆ ವಾದಿ ಮತ್ತು ಪ್ರತಿವಾದಿ 1 ರಿಂದ 4 ರವರ ಮಧ್ಯ ಪಾಲು ವಾಟ್ನಿಯಾಗಿದ್ದು, ಸದರಿ ಪಾಲು ವಾಟ್ನಿಯಲ್ಲಿ ಸರ್ವೆ ನಂ.65/37, 75/2ಬಿ ಜಮೀನುಗಳು ಪ್ರತಿವಾದಿ 2 ರವರ ಪಾಲಿಗೆ ಬಂದಿರುವರು. ಸರ್ವೆ ನಂ.75/6 ರ ಜಮೀನು ಪ್ರತಿವಾದಿ 4 ರವರ ಪಾಲಿಗೆ ಬಂದಿರುವರು. ಸರ್ವೆ ನಂ.9/2 ರ ಜಮೀನು ಪ್ರತಿವಾದಿ 2 ಮತ್ತು 4 ರವರ ಪಾಲಿಗೆ

ಬಂದಿರುವವು. ಆ ಪ್ರಕಾರ ದಾವಾ ಆಸ್ತಿಗಳಿಗೆ ಹಕ್ಕು ಬದಲಾವಣೆಯಾಗಿರುವುದು ಎಂದು ಹೇಳಿರುವರು. ಈ ಪಾಲು ವಾಟ್ನಿ ಮಾಡಿಕೊಂಡ ಬಗ್ಗೆ ಯಾವುದೇ ದಾಖಲೆಯನ್ನು ಪ್ರತಿವಾದಿಯರು ಹಾಜರುಪಡಿಸಿರುವುದಿಲ್ಲ. ಆದರೆ ನಿಪಿ-6 ರ ಪ್ರಕಾರ ದಿನಾಂಕಃ 27.012.2018 ರಂದು ಎಮ್.ಆರ್.ನಂ.ಎಚ್.12 ರ ಪ್ರಕಾರ ಕುಟುಂಬದ ಮೂಲ ಪುರುಷ ದಸ್ತಗೀರಪ್ಪ ಮೃತಪಟ್ಟ ನಂತರ ವಾರಸಾ ನಾತೆಯಿಂದ ವಾದಿ ಮತ್ತು ಪ್ರತಿವಾದಿಯರ ಹೆಸರಿನಲ್ಲಿ ಜಂಟಿಯಾಗಿ ಕಂದಾಯ ಅಧಿಕಾರಿಗಳು ಹಕ್ಕು ಬದಲಾವಣೆ ಮಾಡಿರುವರು. ಆದರೆ ವಾದಿ ಮತ್ತು ಪ್ರತಿವಾದಿ 1 ರಿಂದ 4 ರವರ ಮಧ್ಯ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ನೊಂದಾಯಿತ ಪಾಲು ವಾಟ್ನಿಯಾದ ಬಗ್ಗೆ ಯಾವುದೇ ದಾಖಲೆಗಳನ್ನು ಪ್ರತಿವಾದಿಯರು ಹಾಜರುಪಡಿಸಿರುವುದಿಲ್ಲ ಮತ್ತು ಪ್ರತಿವಾದಿ 1 ರಿಂದ 4 ರವರು ತಮ್ಮ ಪರವಾಗಿ ತಮ್ಮ ಲಿಖಿತ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತುಪಡಿಸಲು ಯಾವುದೇ ಸಾಕ್ಷ್ಯಗಳನ್ನು ವಿಚಾರಣೆಗೊಳಪಡಿಸಿಕೊಂಡಿರುವುದಿಲ್ಲ. ಆದರೆ ನಿಪಿ-7, ನಿಪಿ-8, ನಿಪಿ-9 ಮತ್ತು ನಿಪಿ-10 ರ ದಾಖಲೆಯ ಪ್ರಕಾರ ಕಂದಾಯ ಅಧಿಕಾರಿಗಳು ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪ್ರತಿವಾದಿಯರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಿರುವರು. ಆದರೆ ಈ ಹಕ್ಕು ಬದಲಾವಣೆ ಮಾಡಿರುವ ಪೂರ್ವದಲ್ಲಿ ವಾದಿಯ ಒಪ್ಪಿಗೆ ಪಡೆದುಕೊಂಡ ಬಗ್ಗೆ ಅಥವಾ ವಾದಿಯು ನೊಂದಾಯಿತ ದಾಖಲೆಯ ಮೂಲಕ ಹಕ್ಕು ಬಿಟ್ಟು ಕೊಟ್ಟ ಬಗ್ಗೆ ಪ್ರತಿವಾದಿಯರು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಈ ವಿವಾದಂಶವನ್ನು ರುಜುವಾತುಪಡಿಸಲು ಪ್ರತಿವಾದಿಯರು ವಿಫಲರಾಗಿರುವರು. ಆದ್ದರಿಂದ ಈ **3**ನೇ ವಿವಾದಂಶವನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

**20.** ಹೆಚ್ಚುವರಿ ವಿವಾದಂಶ 1ಃ ಈ ವಿವಾದಂಶವನ್ನು ರುಜುವಾತುಪಡಿಸುವ ಭಾರ ಪ್ರತಿವಾದಿ 5 ರವರ ಮೇಲಿದ್ದು ಪ್ರತಿವಾದಿ 5 ರವರು ತಮ್ಮ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನುಡಿಯುವುದೇನೆಂದರೆ, ದಿಃ **04.01.2023** ರಂದು ಪ್ರತಿವಾದಿ 2 ಮತ್ತು 4 ರವರು ಸರ್ವೇ ನಂ.**9/2** ರ ಜಮೀನಿಗೆ ಸಂಬಂಧಿಸಿದಂತೆ ವಾಟ್ನಿ ಪತ್ರ ಮಾಡಿಕೊಂಡಿದ್ದು ಆ ವಾಟ್ನಿ ಪತ್ರವು ಮುಧೋಳದ ಉಪನೊಂದಣಿ ಕಚೇರಿಯಲ್ಲಿ ನೊಂದಣಿಯಾಗಿದ್ದು ನಂತರ ಪ್ರತಿವಾದಿ 2 ರವರು ಸರ್ವೇ ನಂ.**9/2** ರ ಜಮೀನನ್ನು ದಿಃ **18.01.2023** ರಂದು ಡಿಡಬ್ಲ್ಯೂ-**1** ರವರ ಹೆಸರಿನಲ್ಲಿ ನೊಂದಾಯಿತ ಬಕ್ಸಿಸ ಪತ್ರ ಮಾಡಿಕೊಟ್ಟಿರುವುದಾಗೆಂದು ಸಾಕ್ಷ್ಯ ನುಡಿದು ತಮ್ಮ ಸಾಕ್ಷ್ಯಕ್ಕೆ ಪೂರಕವಾಗಿ ಈ ನೊಂದಾಯಿತ ಬಕ್ಸಿಸ ಪತ್ರವನ್ನು ನಿಡಿ-**1** ಎಂದು ಗುರುತಿಸಿಕೊಂಡಿರುವರು. ನಿಡಿ-**1** ರ ದಾಖಲೆಯನ್ನು ಪರಿಶೀಲಿಸಿದಾಗ ಪ್ರತಿವಾದಿ 2 ರವರು ದಾವಾ ಆಸ್ತಿ ಸರ್ವೇ ನಂ.**9/2** ವಿಸ್ತೀರ್ಣ 3 ಎಕರೆ ಜಮೀನನ್ನು ಪ್ರತಿವಾದಿ 2 ರವರ ಹೆಸರಿನಲ್ಲಿ ನೊಂದಾಯಿತ ಬಕ್ಸಿಸ ಪತ್ರವನ್ನು ಮಾಡಿಕೊಟ್ಟಿದ್ದು ಈ ದಾಖಲೆಯಿಂದ ಕಂಡು ಬರುವುದು. ಈ ದಾಖಲೆಯ ಆಧಾರದ ಮೇರೆಗೆ ನಿಡಿ-**2** ರ ಪ್ರಕಾರ ಪ್ರತಿವಾದಿ 5 ರವರ ಹೆಸರಿನಲ್ಲಿ ಎಮ್ ಆರ್ ನಂ.ಎಚ್-**14** ದಿಃ **30.01.2023** ರಂದು ಹಕ್ಕು ಬದಲಾವಣೆಯಾಗಿರುವುದು ಈ ದಾಖಲೆಯಿಂದ ಕಂಡುಬರುವುದು. ಆದರೆ ದಾವಾ ಆಸ್ತಿಯು ಪ್ರತಿವಾದಿ 2 ರವರ ಸಂಪೂರ್ಣ ಮಾಲೀಕತ್ವದ ಆಸ್ತಿಯಾಗಿರುವುದಿಲ್ಲ. ಈ ದಾವಾ ಆಸ್ತಿಯಲ್ಲಿ ವಾದಿ, ಪ್ರತಿವಾದಿ 1 ರಿಂದ 4 ರವರಿಗೆ ಸಮನಾದ **1/5** ಹಿಸ್ಸೆಯಿರುವುದು. ಅವಿಭಜಿತ **1/5** ಹಿಸ್ಸೆಯನ್ನು ಮಾತ್ರ ಪ್ರತಿವಾದಿ 2 ರವರು ಪ್ರತಿವಾದಿ 5 ರವರಿಗೆ ದಾನವಾಗಿ ನೀಡಲು ಹಕ್ಕನ್ನು ಹೊಂದಿರುವರು.

ಆದ್ದರಿಂದ ನಿಡಿ-1 ರ ಪ್ರಕಾರ ಪ್ರತಿವಾದಿ 2 ರವರು ಪ್ರತಿವಾದಿ 5 ರವರಿಗೆ ಸಂಪೂರ್ಣ ಜಮೀನನ್ನು ದಾನವಾಗಿ ನೀಡಿರುವುದು ಕಾನೂನಿನ ಅಡಿಯಲ್ಲಿ ಊರ್ಜಿತವಾಗಿರುವುದಿಲ್ಲ. ಆದ್ದರಿಂದ ಪ್ರತಿವಾದಿ 2 ರವರು ಸರ್ವೇ ನಂ.9/2 ರಲ್ಲಿನ 1/5 ಹಿಸ್ಸೆಗೆ ಮಾತ್ರ ಪ್ರತಿವಾದಿ 5 ರವರಿಗೆ ದಾನವಾಗಿ ನೀಡಲು ಹಕ್ಕನ್ನು ಹೊಂದಿರುವರು. ಆದ್ದರಿಂದ ನಿಡಿ-1 ರ ಪ್ರಕಾರ ಪ್ರತಿವಾದಿ 5 ರವರು ಸರ್ವೇ ನಂ.9/2 ಒಟ್ಟು ವಿಸ್ತೀರ್ಣ 3 ಎಕರೆ ಜಮೀನನ್ನು ಕಾನೂನುಬದ್ಧವಾಗಿ ದಾನವಾಗಿ ಪಡೆದುಕೊಳ್ಳುವ ಹಕ್ಕನ್ನು ಹೊಂದಿರುವುದಿಲ್ಲ. ಆದ್ದರಿಂದ ಈ ಹೆಚ್ಚುವರಿ ವಿವಾದಂಶವನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

**21.** ಹೆಚ್ಚುವರಿ ವಿವಾದಂಶ 2ಃ ಈ ವಿವಾದಂಶವನ್ನು ರುಜುವಾತು ಪಡಿಸುವ ಭಾರ ಪ್ರತಿವಾದಿ 5 ರವರ ಮೇಲಿದ್ದು ನಿಡಿ-1 ರಿಂದ ನಿಡಿ-3 ರ ದಾಖಲೆಯ ಪ್ರಕಾರ ಸರ್ವೇ ನಂ.9/2 ರ ಆಸ್ತಿಯನ್ನು ಪ್ರತಿವಾದಿ 2 ರವರು ಪ್ರತಿವಾದಿ 5 ರವರಿಗೆ ದಾನವಾಗಿ ನೀಡಿದ್ದು ಆ ಪ್ರಕಾರ ಪ್ರತಿವಾದಿ 5 ರವರ ಹೆಸರಿನಲ್ಲಿ ಹಕ್ಕು ಬದಲಾವಣೆಯಾಗಿ ಪಹಣಿ ಪತ್ರಿಕೆಯಲ್ಲೂ ಸಹ ಅವರ ಹೆಸರು ದಾಖಲಾಗಿರುವುದು. ಆದರೆ ಈ ದಾವಾ ಆಸ್ತಿಯಲ್ಲಿ ಪ್ರತಿವಾದಿ 2 ರವರಿಗೆ ಅವಿಭಜಿತ 1/5 ಹಿಸ್ಸೆ ಮಾತ್ರ ಇರುವುದರಿಂದ ಆ ಹಿಸ್ಸೆಗೆ ಮಾತ್ರ ನಿಡಿ-1 ರ ಪ್ರಕಾರ ಪ್ರತಿವಾದಿ 5 ರವರು ಮಾಲೀಕರಾಗುವರು. ಆದ್ದರಿಂದ ಈ ಹೆಚ್ಚುವರಿ ವಿವಾದಂಶವನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

**22.** ವಿವಾದಂಶ 4ಃ ಈ ವಿವಾದಂಶವನ್ನು ರುಜುವತುಪಡಿಸುವ ಭಾರ ವಾದಿಯ ಮೇಲೆ ಇರುವುದು. ದಾವಾ ಆಸ್ತಿಗಳು ವಾದ ಪತ್ರದಲ್ಲಿ ಹೇಳಿರುವ ಕುಟುಂಬದ ಮೂಲ ಪುರುಷನ ಆಸ್ತಿಗಳಾಗಿದ್ದು ಈತ ಮೃತಪಟ್ಟ ನಂತರ ವಾದಿ ಮತ್ತು ಪ್ರತಿವಾದಿ 1 ರಿಂದ 4 ರವರು ಮೊದಲನೇ ವರ್ಗದ ಕಾನೂನುಬದ್ಧ ವಾರಸುದಾರರಾಗಿರುವರು. ವಾದಿ ಮತ್ತು ಪ್ರತಿವಾದಿ 1 ರಿಂದ 4 ರವರ ಕುಟುಂಬದ ಮೂಲ ಪುರುಷ ಮೃತ ದಸ್ತಗೀರಪ್ಪ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಮೃತ್ಯುಪತ್ರವನ್ನು ಬರೆದುಕೊಡದೆ ಮೃತಪಟ್ಟಿರುವರು. ಆದ್ದರಿಂದ ಹಿಂದೂ ಉತ್ತರಾಧಿಕಾರ ತಿದ್ದುಪಡಿ ಅಧಿನಿಯಮ **2005** ಜಾರಿಗೆ ಬಂದ ಮೇಲೆ ಮತ್ತು ಜಾರಿಗೆ ಬಂದಾಗಿನಿಂದ ಮಿತಾಕ್ಷರದ ಅವಿಭಕ್ತ ಕುಟುಂಬದ ದಾಯಾದಿಯಾಗಿ ಮಗಳಿಗೆ ದಾಯಾದಿಯ ಸ್ಥಾನಮಾನ ನೀಡಿದ್ದು ಅವಳು ಹುಟ್ಟಿನಿಂದಲೇ ದಾಯಾದಿಯಾಗುವಳೆಂದು ಅದು ಸ್ಪಷ್ಟಪಡಿಸುತ್ತದೆ. ಸಾಮಾನ್ಯವಾಗಿ ಒಬ್ಬ ಪೂರ್ವಜ ಗಳಿಸಿದ ಸಂಪತ್ತಿನಲ್ಲಿ ಪಿತ್ರಾರ್ಜಿತವಾಗಿ ಇತರರೊಂದಿಗೆ ಪಾಲು ಹಂಚಿಕೊಳ್ಳುವವನ್ನು ಜಂಟಿ ವಾರಸುದಾರರೆಂದು ಕರೆಯಲಾಗುತ್ತದೆ. ವಾರಸುದಾರರೆಂದು ಕರೆಯಲಾಗುವವರು ಒಬ್ಬ ಪೂರ್ವಜನ ಪಿತ್ರಾರ್ಜಿತ ಸ್ವತ್ತಿನಲ್ಲಿ ಸಮಾನವಾದ ಭಾಗವನ್ನು ಹೊಂದಿರುವರು ಅಥವಾ ಅವರ ಪೂರ್ವಜರ ಜಮೀನುಗಳಿಗೆ ಸಂಬಂಧಪಟ್ಟಂತೆ ಸಮಾನವಾದ ಪಾಲನ್ನು ಹೊಂದಿರುವರು. ಒಂದು ಸಂಪದವು ಜಂಟಿಯಾಗಿ ಬಂದಿರುವ ಮತ್ತು ಅದನ್ನು ಸಂಪೂರ್ಣ ಸಂಪದವಾಗಿ ಹೊಂದಿರುವ ಒಬ್ಬ ವ್ಯಕ್ತಿ. ಆದರೆ ಕೆಲವು ಸಂದರ್ಭಗಳಲ್ಲಿ ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳು ವಾರಸುದಾರರು ಅಥವಾ ಜಂಟಿ ವಾರಸುದಾರರೆಂದು ಪಡೆದುಕೊಳ್ಳುವರು. ಆದರೆ ಒಬ್ಬ ಜಂಟಿ ವಾರಸುದಾರರನ್ನು

ಅವಿಭಕ್ತ ಕುಟುಂಬದ ಉಳಿದ ಸದಸ್ಯರಿಂದ ಬೇರ್ಪಟ್ಟು ಆತನಿಗಾಗಿ ಭಾಗ ಮಾಡಿರುವ ಜಂಟಿ ಸ್ವತ್ತಿನಲ್ಲಿ ತನ್ನ ಪಾಲನ್ನು ಹೊಂದಿರುವಾಗ ಇನ್ನುಳಿದ ಜಂಟೀ ವಾರಸುದಾರರು ಅವಿಭಕ್ತವಾಗಿ ಮುಂದುವರೆಯುತ್ತಾರೆಂದು ಭಾವಿಸುವಂತಿಲ್ಲ. ಪಾಲು ಎನ್ನುವ ಪದಕ್ಕೆ ಕಾನೂನಿನಲ್ಲಿ ಬೇರೆ-ಬೇರೆ ಅರ್ಥದ ನೆಲೆಗಳಿಗೆ. ಪಾಲು ಎನ್ನುವುದು ಜಂಟಿ ಮಾಲೀಕರು (ಸಾಮಾನ್ಯವಾಗಿ ಜಂಟಿ ವಾರಸುದಾರರಾಗಿರಲೀ ಜಂಟಿ ಗೇಣಿದಾರರಾಗಿರಲೀ) ಹೊಂದಿರುವ ಜಮೀನುಗಳು. ವಾಸದ ಮನೆಗಳು ಮತ್ತು ಅನುವಂಶಿಕ ಸ್ವತ್ತುಗಳನ್ನು ವಿಭಜನೆ ಮಾಡಿಕೊಂಡಿದ್ದು ಅಂತಾ ವಿಭಜನೆ ಕಾರಣದಿಂದ ಜಂಟಿ ಮಾಲೀಕತ್ವವು ಕೊನೆಗೊಳ್ಳುತ್ತದೆ ಮತ್ತು ಪಕ್ಷಗಾರರು ತಾವು ಪಡೆದಿರುವ ಪಾಲುಗಳನ್ನು ಪ್ರತ್ಯೇಕವಾಗಿ ಹೊಂದುತ್ತಾರೆ. ಸಂಸ್ಕೃತದಲ್ಲಿ ವಿಭಾಗ ಎನ್ನುವ ಪದವನ್ನು ಬಳಸಲಾಗಿದೆ. ಇದು ಅಖಂಡವಾಗಿರುವುದಕ್ಕೆ ಸಂಬಂಧಿಸಿದ ವಿವಿಧ ಹಕ್ಕುಗಳನ್ನು ಒಟ್ಟು ರೂಪದ ನಿರ್ಧಿಷ್ಟ ಭಾಗಗಳ ಮೇಲೆ ಹಂಚುವ ಮೂಲಕ ಮಾಡಿರುವ ಹೊಂದಾಣಿಕೆಯಾಗಿರುತ್ತದೆ. ಒಂದು ಪಾಲು ಎನ್ನುವುದು ಜಮೀನಿನಲ್ಲಿ ಜಂಟಿ ಮಾಲೀಕರು ಅಥವಾ ಗೇಣಿದಾರರು ತಮಗೆ ಸಂಬಂಧಪಟ್ಟಂತೆ ಹೊಂದಿದ ಸಾಮಾನ್ಯ ಹಿತಾಸಕ್ತಿಗಳನ್ನು ಬೇರ್ಪಡಿಸಿಕೊಳ್ಳುವುದು ಮತ್ತು ಅವುಗಳನ್ನು ಪ್ರತ್ಯೇಕವಾಗಿ ಅನುಭವಿಸಬೇಕಾಗುವಂತೆ ಮತ್ತು ಹೊಂದಬಹುದಾದಂತಹ ಸುಸ್ಥಾಪಿಸಿಕೊಳ್ಳುವುದಾಗಿದೆ. ಪಾಲು ಮಾಡಿಕೊಳ್ಳುವುದು ಮೊದಲಿನಿಂದಲೂ ಇರುವ ಹಕ್ಕುಗಳನ್ನು ಮರುಹಂಚಿಕೆ ಮಾಡಿಕೊಳ್ಳುವುದಾಗಿದೆ ಹೊರತು ಒಬ್ಬ ವ್ಯಕ್ತಿ ಮೊದಲು ಬಾರಿಗೆ ಹಕ್ಕುಗಳನ್ನು ಅರ್ಜಿಸಿಕೊಳ್ಳುವುದಾಗಿರುವುದಿಲ್ಲ. ಹಂಚಿಕೆ ಆಸ್ತಿಗೆ ಹೊಸ ಸ್ವಾಮ್ಯವನ್ನು ನೀಡುವುದಿಲ್ಲ ಅಥವಾ ಮೃತ ಮಾಲೀಕನ ಸಂಪದಕ್ಕೆ ವಿಶಿಷ್ಟ

ಹಕ್ಕನ್ನು ವರ್ಗಾವಣೆ ಮಾಡುವುದಿಲ್ಲ ಬದಲಾಗಿ ಕಾನೂನು ಯಾವ ವ್ಯಕ್ತಿಗಳಿಗೆ ವಾರಸುದಾರಿಕೆಯನ್ನು ನೀಡುತ್ತದೆ ಮತ್ತು ಅವರ ಸಂಬಂಧಪಟ್ಟ ಹಿತಾಸಕ್ತಿಗಳ ಪ್ರಮಾಣ ಎಷ್ಟಿರುತ್ತದೆ ಅಷ್ಟಕ್ಕೆ ಮಾತ್ರ ಸಂಬಂಧಿಸಿದ ಘೋಷಣೆ ಮಾತ್ರವಾಗಿರುತ್ತದೆ, ಆದರೆ ಪಾಲು ಮಾಡಿಕೊಳ್ಳುವುದು ಅದರ ಎಲ್ಲಾ ಅಂಶಗಳಲ್ಲಿ ಅಲ್ಲದಿದ್ದರೂ ಬಹುಪಾಲು ಅಂಶಗಳಲ್ಲಿ ಒಂದು ಪ್ರತಿಕೂಲವಾದ ಪ್ರಕ್ರಿಯೆಯಾಗಿದ್ದು ಇದು ಆಸ್ತಿ ವರ್ಗಾವಣೆಗೆ ಸಂಬಂಧಿಸಿದ ಪರಿಹಾರದ ಹಕ್ಕನ್ನು ಒತ್ತಿ ಹೇಳಲಾಗಿರುತ್ತದೆ ಮತ್ತು ಅಂತಹ ವರ್ಗಾವಣೆಯನ್ನು ಕಲ್ಪಿಸುವ ಅಥವಾ ಕಾರ್ಯಗತಗೊಳಿಸಿಕೊಂಡಿರುವಂತೆ ಅಂತ ವರ್ಗಾವಣೆಯನ್ನು ಕಲ್ಪಿಸುವ ಡಿಕ್ರಿ ಮಾಡಿಕೊಳ್ಳುವುದಕ್ಕೆ ಕಾರಣವಾಗುತ್ತದೆ. ಪಾಲು ಮಾಡಿಕೊಳ್ಳುವುದು ಎಂಬ ಪದವನ್ನು ಹಿಂದೂ ಉತ್ತರಾಧಿಕಾರ ಅಧಿನಿಯಮ **6** ನೇ ಪ್ರಕರಣದ **5** ನೇ ಉಪಪ್ರಕರಣದ ವಿವರಣೆಯಾಗಿ ವ್ಯಾಖ್ಯಾನಿಸಿದ್ದರೂ ಸದರಿ ಪದಕ್ಕೆ ಕಲ್ಪಿಸಲಾಗಿರುವ ಅರ್ಥವನ್ನು ಸರಿಯಾಗಿ ಅರ್ಥೈಸಬೇಕಿರುತ್ತದೆ. ಅದು ಈ ಪ್ರಕರಣದ ಉದ್ದೇಶಕ್ಕಾಗಿ ಪಾಲು ಮಾಡುವುದು ಎಂದರೆ ನೊಂದಣಿ ಅಧಿನಿಯಮ **1908** ರ ಮೇರೆಗೆ ಯುಕ್ತವಾಗಿ ನೊಂದಣಿಯಾಗಿರುವ ಪಾಲು ಪತ್ರದ ಮೂಲಕ ಅಥವಾ ನ್ಯಾಯಾಲಯದ ಡಿಕ್ರಿ ಮೂಲಕ ಮಾಡಿಕೊಂಡಿರುವ ಪಾಲಿನ ರೂಪದಲ್ಲಿ ಮಾಡಿಕೊಂಡಿರುವ ಯಾವುದೇ ಪಾಲು ಎಂದು ಹೇಳುತ್ತದೆ. ಅವಿಭಕ್ತ ಕುಟುಂಬದ ಸದಸ್ಯನು ಪಾಲಿಗಾಗಿ ಹೂಡಿದ ದಾವೆಯು ಅವನು ಪ್ರತ್ಯೇಕವಾಗುವುದಕ್ಕಾಗಿನ ನಿಸ್ಸಂದಿಗ್ಧವಾದ ಸೂಚನೆಯಾಗಿರುತ್ತದೆ ಮತ್ತು ಪರಿಣಾಮವಾಗಿ ಅದನ್ನು ಹೂಡಿದ ದಿನಾಂಕದಿಂದ ಅವನ ಅವಿಭಕ್ತ ಕುಟುಂಬದ ಸ್ಥಾನಮಾನವು ಬೇರ್ಪಟ್ಟಂತಾಗುತ್ತದೆ. ಬೇರ್ಪಡುವಿಕೆಯ ಪರಿಣಾಮಗಳನ್ನು ಕಂಡುಕೊಳ್ಳುವುದಕ್ಕಾಗಿ ಹಾಗೂ ಸ್ಪಷ್ಟ ಪಾಲುಗಳನ್ನು ಹಂಚಿಕೆ ಮಾಡುವುದಕ್ಕಾಗಿ

ಡಿಕ್ರಿಯು ಅವಶ್ಯಕವಾಗಬಹುದು. ಆದರೆ ಅವನ ತತ್ಪರಿಣಾಮದ ತೀರ್ಪನ್ನು ಪಡೆಯಲಿ ಅಥವಾ ಪಡೆಯದೇ ಇರಲೀ ತನ್ನ ಪ್ರತ್ಯೇಕ ಹಕ್ಕಿನ ಬಗೆಗಿನ ಅವನ ಧೃಡೋಕ್ತಿಯು ಸಂಪದದಲ್ಲಿನ ವಾದಿಯ ಸ್ಥಾನಮಾನವನ್ನು ಬೇರ್ಪಡೆಯಾಗುವಂತೆ ಮಾಡುತ್ತದೆ. ತಿದ್ದುಪಡಿಯಾದ ಅಧಿನಿಯಮದ **6**ನೇ ಪ್ರಕರಣವನ್ನು ಅರ್ಥೈಸುವಾಗ ಹಿಂದೂ ಕಾನೂನಿನಲ್ಲಿರುವ ಪಾಲಿನ ಬಗೆಗಿನ ಈ ಪರಿಕಲ್ಪನೆಗಳು ಹಾಗೂ ಗೃಹಿಕೆಯು ಅನ್ವಯವಾಗುವುದಿಲ್ಲ. **6**ನೇ ಪ್ರಕರಣದಲ್ಲಿ ಪಾಲು ಎಂಬ ಪದವನ್ನು ವ್ಯಾಖ್ಯಾನಿಸಲಾಗಿದೆ ಅದು ಪಾಲಿನ ಅತ್ಯಂತ ಸಂಕುಚಿತ ವ್ಯಾಖ್ಯಾನವಾಗಿದೆ. ಸದರಿ ವ್ಯಾಖ್ಯಾನದ ಪ್ರಕಾರ ಪಾಲು ಎಂದರೆ

> **1.** ನೊಂದಣಿ ಅಧಿನಿಯಮ **1908** **(1908**ರ **16)** ರ ಮೇರೆಗೆ ಕ್ರಮಬದ್ಧವಾಗಿ ನೊಂದಣಿಯಾದ ಪಾಲಿನ ಪತ್ರವನ್ನು ಬರೆದುಕೊಡುವ ಮೂಲಕ ಮಾಡಿದ ಪಾಲು
>
> **2.** ನ್ಯಾಯಾಲಯದ ಡಿಕ್ರಿ ಮೂಲಕ ಪರಿಣಾಮಕಾರಿಯಾದ ಪಾಲು

ಪಾಲನ್ನು ನೊಂದಾಯಿತ ದಸ್ತಾವೇಜಿನ ಮೂಲಕ ರುಜುವಾತುಪಡಿಸದ ಹೊರತು ಮತ್ತು **2**ನೇ ಡಿಸೆಂಬರ್ **2004** ಕ್ಕೂ ಮುಂಚೆ ಅದು ಅಸ್ತಿತ್ವಕ್ಕೆ ಬಂದ ಹೊರತು ಯಾರಿಗೆ ದಾಯಾದಿಯ ಸ್ಥಾನಮಾನವನ್ನು ನೀಡಲಾಗಿದೆಯೋ ಆ ಮಗಳಿಗೆ ಅವಳು ಹುಟ್ಟಿನಿಂದ ಅರ್ಜಿಸಿದಂತ ದಾಯಾದಿ ಸ್ವತ್ತಿನ ಹಕ್ಕನ್ನು ನಿರಾಕರಿಸುವಂತಿಲ್ಲ. ಈ ಅಧಿನಿಯಮದ ತಿದ್ದುಪಡಿ ಜಾರಿಗೆ ಬಂದ ತರುವಾಯ ಮೌಖಿಕ ಪಾಲುಗಳಿಗೆ

ಪಾಲುಗಳ ವಿತರಣೆಯ ಒಪ್ಪಂದಕ್ಕೆ ಹಿಂದಿನ ದಿನಾಂಕ ಹಾಕಿ ಸೃಷ್ಟಿ ಮಾಡಬಹುದು, ಸೃಜಿಸಬಹುದು ಮತ್ತು ಆದಕಾರಣ ಮಗಳ ಕಾನೂನು ಸಮ್ಮತ ಹಕ್ಕಿನ ವಂಚನೆಯಾಗುವುದನ್ನು ತಡೆಯಬೇಕಾಗಿದ್ದು ಈ ಹಿನ್ನಲೆಯಲ್ಲಿ ಪಾಲನ್ನು ನೊಂದಯಿತ ದಾಸ್ತಾವೇಜು ಪತ್ರಗಳ ಮೂಲಕ ಮಾಡಿದ್ದ ಹೊರತು ಸ್ವತ್ತಿನ ಹಕ್ಕನ್ನು ನಿರಾಕರಿಸುವಂತಿಲ್ಲ. ಪಾಲನ್ನು ನೊಂದಾಯಿತ ದಸ್ತಾವೇಜಿನ ಮೂಲಕ ರುಜುವಾತುಪಡಿಸದೇ ಇದ್ದರೆ ದಾಯಾದಿ ಸ್ವತ್ತಿನಲ್ಲಿ ದಾಯಾದಿಯ ಮಗನಂತೆ ಅವಳ ಮಗಳಿಗೆ ಸಮಾನ ಹಕ್ಕನ್ನು ನೀಡಿರುವಾಗ ಹಿಂದೂ ಕಾನೂನು ಸಂವಾದಿಯಾಗಿ ಪಾಲುಗಾರಿಕೆಯ ಕಾನೂನಿನ ಮೇರೆಗೆ ಗುರುತಿಸಿದಂತೆ ದಾಯಾದಿ ಸ್ವತ್ತಿನಲ್ಲಿ ಪಾಲಾಗಿತ್ತೆಂಬ ಸಂಗತಿ ಏನೇ ಇದ್ದರೂ ಅವನ ಮಗನಿಗೆ ಸಿಗುವಂತೆ ದಾಯಾದಿ ಸ್ವತ್ತಿನಲ್ಲಿ ಮಗಳು ಪಾಲು ಪಡೆಯಲು ಹಕ್ಕುಳ್ಳವಳಾಗಿರುವಳು.

ಆದ್ದರಿಂದ ವಾದಿ, ಪ್ರತಿವಾದಿ **1** ರಿಂದ **4** ರವರು ಮೃತ ದಸ್ತಗೀರೆಪ್ಪನ ಮೊದಲನೇ ವರ್ಗದ ಕಾನೂನುಬದ್ದ ವಾರಸುದಾರರು ಆಗಿರುವುದರಿಂದ ದಾವಾ ಆಸ್ತಿಗಳಲ್ಲಿ ತಲಾ **1/5** ಹಿಸ್ಸೆಯನ್ನು ಪಡೆದುಕೊಳ್ಳುವ ಹಕ್ಕನ್ನು ಹೊಂದಿರುವರು. ದಾವಾ ಆಸ್ತಿಗಳು ವಾದಿಯ ಮತ್ತು ಪ್ರತಿವಾದಿ **1** ರಿಂದ **4** ರವರ ಹಿಂದೂ ಅವಿಭಕ್ತ ಕುಟುಂಬದ ಹಿರಿಯರಿಂದ ಬಂದಂತಹ ಆಸ್ತಿಗಳಾಗಿರುವುದರಿಂದ ಈ ವಿವಾದಂಶ **4** ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

**23.** ವಿವಾದಾಂಶ **7:** ಮೇಲಿನ ಕಾರಣಗಳಿಂದಾಗಿ ಈ ಕೆಳಗಿನಂತೆ...

## ಆದೇಶ

ವಾದಿಯ ದಾವೆಯನ್ನು ಡಿಕ್ರಿಗೊಳಿಸಲಾಗಿದೆ.

ವಾದಿಯು ದಾವಾ ಆಸ್ತಿಗಳಲ್ಲಿ **1/5** ಹಿಸ್ಸೆಯನ್ನು ಪಡೆದುಕೊಳ್ಳಲು ಅರ್ಹರಾಗಿರುವರು.

ಖರ್ಚಿನ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.

ಮೇಲ್ಕಂಡಂತೆ ಪ್ರಾಥಮಿಕ ಡಿಕ್ರಿ ಬರೆಯಲು ಆದೇಶಿಸಲಾಗಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಧರಿತ ಪ್ರಕರಣವಾದ ಸಿವಿಲ್ ಮೇಲ್ಮನವಿ ಸಂಖ್ಯೆ **6406-6407/2010(Kattukandi Edathil Krishnan and Another V/s Kattukandi Edathil Valsan and Others)** ರಲ್ಲಿನ ನಿರ್ದೇಶನದಂತೆ ದಿವಾಣಿ ಪ್ರಕ್ರಿಯೆ ಸಂಹಿತೆ ಕ್ರಮಾದೇಶ **20** ನಿಯಮ **18** ರಡಿಯಲ್ಲಿ ಹೇಳಿದಂತೆ, ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯ ಸಲುವಾಗಿ, ಅಂತಿಮ ಡಿಕ್ರಿ ಪ್ರಕರಣವಾಗಿ ಪರಿವರ್ತಿಸಿ ದಿನಾಂಕ **06.04.2026** ರಂದು ಕರೆಸಲು ಈ ಮೂಲಕ ಕಚೇರಿಗೆ ನಿರ್ದೇಶಿಸಿ ಆದೇಶಿಸಿದೆ.

ದಿನಾಂಕ **06.04.2026** ರಂದು ಅಂತಿಮ ಡಿಕ್ರಿಯ ಪ್ರಕ್ರಿಯೆಯಲ್ಲಿ ಉಭಯ ಪಕ್ಷಗಾರರು ಹಾಜರಾಗತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರಳಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ ಅವರು ಬೆರಳಚ್ಚು ಮಾಡಿದ ನಂತರ ಓದಿ ತಿದ್ದುಪಡಿ ಮಾಡಿ ಬಹಿರಂಗ ನ್ಯಾಯಾಲಯದಲ್ಲಿ ಇದೇ ದಿನಾಂಕಃ **06** ನೇ ಮಾರ್ಚ **2026** ನೇ ದಿನದಂದು ವಿದ್ಯುಕ್ತವಾಗಿ ಘೋಷಿಸಲಾಯಿತು).

(ವಿಜಯಕುಮಾರ.ಎಮ್.ಕನ್ನೂರ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು., ಮುಧೋಳ.

## ಅನುಸೂಚಿ

1. **ವಾದಿಯರ ಪರ ಸಾಕ್ಷಿದಾರರ ಪಟ್ಟಿಃ**

ಪಿಡಬ್ಲ್ಯೂ-1 : ಶ್ರೀಮತಿ ಕಸ್ತೂರವ್ವ ಗಂಗಪ್ಪ ಮಾದರ

2. **ವಾದಿಯರ ಪರ ಹಾಜರುಪಡಿಸಿದ ದಾಖಲಾತಿಗಳ ಪಟ್ಟಿ ಃ**

ನಿಪಿ-1 : ಸರ್ವೇ ನಂ.9/2 ರ 2020-21 ನೇ ಸಾಲಿನ ಪಹಣಿ ಪತ್ರಿಕೆ
ನಿಪಿ.2 : ಸರ್ವೇ ನಂ.75/2 ಬ ರ 2020-21 ನೇ ಸಾಲಿನ ಪಹಣಿ ಪತ್ರಿಕೆ
ನಿಪಿ.3 : ಸರ್ವೇ ನಂ.75/3 ರ 2020-21 ನೇ ಸಾಲಿನ ಪಹಣಿ ಪತ್ರಿಕೆ
ನಿಪಿ.4 : ಸರ್ವೇ ನಂ.65/37 ರ 2020-21 ನೇ ಸಾಲಿನ ಪಹಣಿ ಪತ್ರಿಕೆ
ನಿಪಿ.5 : ಸರ್ವೇ ನಂ.65/115 ರ 2020-21 ನೇ ಸಾಲಿನ ಪಹಣಿ ಪತ್ರಿಕೆ
ನಿಪಿ.6 : ಎಮ್.ಆರ್.ನಂ.ಎಚ್12/2018-19 ರ ಮ್ಯುಟೇಶನ ರಜಿಸ್ಟರನ ಪ್ರತಿ
ನಿಪಿ.7 : ಎಮ್.ಆರ್.ನಂ.ಎಚ್17/2019-20 ರ ಮ್ಯುಟೇಶನ ರಜಿಸ್ಟರನ ಪ್ರತಿ
ನಿಪಿ.8 : ಎಮ್.ಆರ್.ನಂ.ಎಚ್-7/2013-14 ರ ಮ್ಯುಟೇಶನ ರಜಿಸ್ಟರನ ಪ್ರತಿ
ನಿಪಿ.9 : ಎಮ್.ಆರ್.ನಂ.ಎಚ್-9/2015-16 ಮ್ಯುಟೇಶನ ರಜಿಸ್ಟರನ ಪ್ರತಿ
ನಿಪಿ.10 : ಎಮ್.ಆರ್.ನಂ.ಎಚ್-3/2013-14 ರ ಮ್ಯುಟೇಶನ ರಜಿಸ್ಟರನ ಪ್ರತಿ
ನಿಪಿ.11 : ಎಮ್.ಆರ್.ನಂ.ಎಚ್-3/2015-16 ರ ಮ್ಯುಟೇಶನ ರಜಿಸ್ಟರನ ಪ್ರತಿ
ನಿಪಿ.12 : ಸರ್ವೇ ನಂ.9/2 ರ 2023-24 ನೇ ಸಾಲಿನ ಪಹಣಿ ಪತ್ರಿಕೆ
ನಿಪಿ.13 : ಮ್ಯುಟೇಶನ ರಜಿಸ್ಟರನ ಪ್ರತಿ

3. **ಪ್ರತಿವಾದಿ ಪರ ಸಾಕ್ಷಿದಾರರ ಪಟ್ಟಿ ಃ**

ಡಿ.ಡಬ್ಲ್ಯೂ-1 : ಶ್ರೀ.ಅರ್ಜುನ ತಂದೆ ಯಲ್ಲಪ್ಪ ಮಾದರ

4. **ಪ್ರತಿವಾದಿ ಪರ ಹಾಜರುಪಡಿಸಿದ ದಾಖಲಾತಿಗಳ ಪಟ್ಟಿ**

ನಿಡಿ.1 : ನೊಂದಾಯಿತ ಬಕ್ಸಿಸ ಪತ್ರ

ನಿಡಿ.2 : ಎಂ.ಆರ್.ಎಚ್-14 ರ ಆದೇಶದ ಪ್ರತಿ

ನಿಡಿ.3 : ದಾವಾ ಜಮೀನಿನ ಪಹಣಿ ಪತ್ರಿಕೆ

(ವಿಜಯಕುಮಾರ.ಎಮ್.ಕನ್ನೂರ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು., ಮುಧೋಳ.

VIJAYAKUMAR KANNUR
Digitally signed by VIJAYAKUMAR KANNUR
Date: 2026.03.12 12:30:55 +0530